ಮೂಲ ದಾವಾ ಸಂಖ್ಯೆ. 211/2016 ಡಿ ಡಬ್ಲ್ಯೂ 1

(ದಿನಾಂಕ 14-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಬಿ ಆರ್ ವಕೀಲರಿಂದಃ-

ನನ್ನ ಅಜ್ಜಿ ಹೋಟೇಲ್ ಚನ್ನಮ್ಮ ಇವರು ಹೊಸಕೇರಿಯಲ್ಲಿ ಸ್ವಲ್ಪ ದಿನದ ಕಾಲ ಹೋಟೇಲ್ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿಯು ನಮ್ಮ ಅಜ್ಜಿಗೆ ಹೋಟೇಲ್ ಚನ್ನಮ್ಮ ಅಂತಾ ಕರೆಯುತ್ತಾರೆ ಆದರೆ ಹೋಟೇಲ್ ಇಟ್ಟಿರಲಿಲ್ಲವೆನ್ನುತ್ತಾರೆ. ನನ್ನ ಅಜ್ಜಿ ಬಳೆಗಾರ ಮಲ್ಲಪ್ಪನ ಅಂಗಡಿ ಹತ್ತಿರ ಹೋಟೇಲ್ ಇಟ್ಟಿದ್ದರು ಆ ಕಾರಣದಿಂದ ಅವರಿಗೆ ಹೊಲಟೇಲ್ ಚನ್ನಮ್ಮ ಅಂತಾ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಬಳೆಗಾರ ಮಲ್ಲಪ್ಪನ ಅಂಗಡಿ ಹತ್ತಿರ ಇನ್ನೂ ಜಾಗ ಖಾಲಿ ಇದೆ ಎಂದರೆ ಸರಿಯಲ್ಲ. ಆ ಜಾಗ ನಾನು ನೋಡಿಲ್ಲ. ಆ ಜಾಗೆಯ ಚಕ್ಕುಬಂದಿ ಪೂಃಉಳ್ಳಾಗಡ್ಡಿ ಕೊಟ್ರಪ್ಪ, ಪಃ ಮ್ಯಾಸರ ಈರಪ್ಪ, ಉಃ ದಾರಿ ಹಾಗೂ ದಃಸಿದ್ದಪ್ಪರ ದೇವಸ್ಥಾನ ಎಂದರೆ ಸಾಕ್ಷಿಯು ಅದು ನಮ್ಮ ತಂದೆಯ ಆಸ್ತಿ ಎನ್ನುತ್ತಾರೆ.

ನಮ್ಮ ಅಜ್ಜಿಯ ಸ್ವಂತ ಊರು ಒಳಗುಂದಿ. ಅವರ ತವರು ಮನೆಯ ಹೆಸರು ಬಲ್ಲಹುಣಸಿ. ನನ್ನ ಅಜ್ಜಿಯ ದೊಡ್ಡ ಮಗಳು ಗುರುಬಸಮ್ಮ ಇವಳನ್ನು ಹೊಸಕೇರಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆಂದರೆ ಸರಿ. ನನ್ನ ಅಜ್ಜಿ ತನ್ನ ಮಗಳಾದ ಗುರುಬಸಮ್ಮ ಇವರ ಮನೆಯಲ್ಲಿ ಬಂದು ವಾಸವಾಗಿದ್ದರು ಎಂದರೆ ಸರಿ. ದಿಃ13-05-1981 ರಂದು ಬಿ ಡಿ ಓ ರವರು ಒಂದು ಜನತಾ ಮನೆಯನ್ನು ವಾದಿಗೆ ಕೊಟ್ಟಿದ್ದರು ಅದರ ಬಗ್ಗೆ ಹಕ್ಕುಪತ್ರ ನೀಡಿದ್ದರು ಈ ವಿಚಾರ ನಿಮಗೆ ಗೊತ್ತಾ ಎಂದರೆ ಇಲ್ಲ. ವಾದಿಯ ಜೊತೆ ಒಟ್ಟು 13 ಫಲಾನುಭವಿಗಳಿಗೆ ಬಿ ಡಿ ಓ ರವರು ಪ್ರೊಸೀಡಿಂಗ್ ಆಧಾರದ ಮೇಲೆ ಜನತಾ ಮನೆಗಳನ್ನು ಕೊಟ್ಟಿದ್ದರು ಈ ವಿಚಾರ ನಿಮಗೆ ಗೊತ್ತಾ ಎಂದರೆ ಇಲ್ಲ. ಸದರಿ ದಾಖಲೆಗಳಾಧಾರದ ಮೇಲೆ ವಾದಿ ಮತ್ತು ಒಟ್ಟು 13 ಜನರ ಹೆಸರುಗಳನ್ನು ಅವರಿಗೆ ಕೊಟ್ಟಿರುವಂತಹ ಆಸ್ತಿಯ ದಾಖಲೆಗಳಲ್ಲಿ ಪಂಚಾಯ್ತಿಯವರು ಅವರ ಹೆಸರುಗಳನ್ನು ದಾಖಲುಪಡಿಸಿರುತ್ತಾರೆ ಈ ವಿಚಾರ ನಿಮಗೆ ಗೊತ್ತಾ ಎಂದರೆ ಇಲ್ಲ ಸಾಕ್ಷಿ ಮುಂದುವರೆದು ನಮ್ಮ ಅಜ್ಜಿಯ ಹೆಸರು ಇರುತ್ತದೆನ್ನುತ್ತಾರೆ. ನಿಮ್ಮ ಅಜ್ಜಿಗೆ ಸರ್ಕಾರದವರು ಏನಾದರೂ ಆಸ್ತಿಯ ಬಗ್ಗೆ ಪಟ್ಟಾವನ್ನು ಕೊಟ್ಟಿದ್ದಾರಾ ಅದನ್ನು ನ್ಯಾಯಾಲಯಕ್ಕೆ ಏನಾದರೂ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಯಾವುದೇ ಪಟ್ಟಾ ಆಗಿಲ್ಲವೆನ್ನುತ್ತಾರೆ.

ಪ್ಲಾಟ್ ನಂ.6 ವಾದಿಗೆ ಬಿ ಡಿ ಓ ರವರು ಕೊಟ್ಟಿದ್ದು ಈ ವಿಚಾರ ನಿಮಗೆ ಗೊತ್ತಾ ಎಂದರೆ ಇಲ್ಲ. ಸದರಿ ಪ್ಲಾಟ್ ನಂ.6 ರ ಬಗ್ಗೆ ಅಂದಿನ ಮಂಡಲ ಪಂಚಾಯ್ತಿಯವರು ಡೋರ್ ನಂ.13 ನ್ನು

ಕರಾಕರಣೆಯಾದಿಯಲ್ಲಿ ನಮೂದಿಸಿರುತ್ತಾರೆ ಈ ವಿಚಾರ ನಿಮಗೆ ಗೊತ್ತಾ ಎಂದರೆ ಇಲ್ಲ. ಡೋರ್ ನಂ.13 ರ ಚಕ್ಕುಬಂದಿ ಪೂಃ ರಸ್ತೆ, ಪಃ ಖಾಲಿ ಜಾಗ, ಉಃ ರಾಟೀ ವೀರಣ್ಣ ಇವರ ಆಸ್ತಿ ಹಾಗೂ ದಃಹೋಟೇಲ್ ಚನ್ನಮ್ಮ ಇವರ ಆಸ್ತಿ ಇರುತ್ತದೆ. ಸದರಿ ಚಕ್ಕುಬಂದಿ ಮಧ್ಯದಲ್ಲಿರುವ ಆಸ್ತಿ ವಾದಿಗೆ ಸೇರಿರುತ್ತದೆಂದರೆ ಸರಿಯಲ್ಲ. ಡೋರ್ ನಂ.12 ರ ಚಕ್ಕುಬಂದಿ ಪೂಃ ರಸ್ತೆ, ಉಃ ಸಣ್ಣೀರಪ್ಪ, ಪಃ ಅಂಗಡಿ ವೀರಮ್ಮನ ಮನೆ ಹಾಗೂ ದಃನಾಗರಾಜ ಇವರು ಮನೆ ಇರುತ್ತದೆ. ನಮ್ಮ ಅಜ್ಜಿಯ ಹೆಸರಿನಲ್ಲಿ ಆಸ್ತಿ ದಾಖಲಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಮ್ಮ ಪ್ರಕಾರ ಡೋರ್ ನಂ.12 ರಲ್ಲಿ ನೀವು ಮತ್ತು ಡೋರ್ ನಂ.13 ರಲ್ಲಿ ವಾದಿ ಇದ್ದಾರಾ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲವೆನ್ನುತ್ತಾರೆ.

ನಾನು ಸುಮಾರು 40 ವರ್ಷದಿಂದ ಹೊಸಕೇರಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನ್ನನ್ನು ಖಾನಾಮಡುಗು ಗ್ರಾಮಕ್ಕೆ ವಿವಾಹ ಮಾಡಿಕೊಟ್ಟಿರುತ್ತಾರೆ. ಸದರಿ ಖಾನಾಮಡುಗು ಗ್ರಾಮ ಹೊಸಕೇರಿಯಿಂದ 60-70 ಕಿ ಮೀ ದೂರದಲ್ಲಿದೆ ಎಂದರೆ ಸರಿ. ಹೊಸಕೇರಿ ಗ್ರಾಮದಲ್ಲಿ ನಾನು 40 ವರ್ಷದಿಂದ ವಾಸವಾಗಿರುವುದರಿಂದ ಯಾರ್ಯಾರ ಮನೆಯಲ್ಲಿ ಯಾರ್ಯಾರು ವಾಸವಾಗಿರುತ್ತಾರೆಂದರೆ ಸರಿ. ಪ್ಲಾಟ್ ನಂ.6 ಡೋರ್ ನಂ.13 ರಲ್ಲಿ ಸಣ್ಣವೀರಪ್ಪರವರು ವಾಸವಾಗಿರುತ್ತಾರೆ. ಸದರಿ ಮನೆಯಲ್ಲಿ ಸಣ್ಣವೀರಪ್ಪ ವಾಸವಾಗಿಲ್ಲ ದೊಡ್ಡವೀರಪ್ಪ ವಾಸವಾಗಿರುತ್ತಾರೆನ್ನುತ್ತಾರೆ. ಸಣ್ಣವೀರಪ್ಪ ಮತ್ತು ದೊಡ್ಡವೀರಪ್ಪ ಸಹೋದರರು ಎಂದರೆ ಸರಿ. ದಾವಾಸ್ತಿಯಲ್ಲಿ ವಾದಿಗೆ ಸರ್ಕಾರದವರು ಪಟ್ಟಾ ಕೊಟ್ಟ ದಿನದಿಂದ ವಾದಿಯು ಸದರಿ ಆಸ್ತಿಯಲ್ಲಿ ವಾಸವಾಗಿರುತ್ತಾನೆಂದರೆ ಸರಿಯಲ್ಲ. ದೊಡ್ಡವೀರಪ್ಪ ಇವರಿಗೆ ಬಹಳ ವಯಸ್ಸಾಗಿದೆ ಎಂದರೆ ಸರಿ ಅವರು ಅನಕ್ಷರಸ್ಥರು ಎಂದರೆ ನನಗೆ ಗೊತ್ತಿಲ್ಲ. ಅವರು ಬಹಳ ಮುಗ್ದರು ಎಂದರೆ ಸರಿಯಲ್ಲ.

ನನ್ನ ಅಜ್ಜಿಯೇ ಆಸ್ತಿಯ ಮಾಲೀಕಳು ಅಂತಾ ತೋರಿಸುವ ಯಾವುದೇ ಟೈಟಲ್ ದಾಖಲೆಗಳು ನನ್ನ ಬಳಿ ಇಲ್ಲವೆಂದರೆ ಸರಿಯಲ್ಲ. ನಾನು ಗ್ರಾಮಪಂಚಾಯ್ತಿಯವರ ಜೊತೆ ಸೇರಿಕೊಂಡು ಅಕ್ರಮವಾಗಿ ನನ್ನ ಹೆಸರನ್ನು ಪಂಚಾಯತ್ ಆಸ್ತಿಯಲ್ಲಿ ಸೇರಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಮ್ಮ ಅಜ್ಜಿಯ ಹೆಸರಿನಿಂದ ನನ್ನ ಹೆಸರಿಗೆ ಆಸ್ತಿಯು ಯಾವುದೇ ರೀತಿಯಿಂದ ಹಕ್ಕುದಾಖಲೆಗಳಲ್ಲಿ ಬದಲಾವಣೆಯಾಗಿರುವುದಿಲ್ಲವೆಂದರೆ ಸರಿಯಲ್ಲ. ನನ್ನ ಅಜ್ಜಿಯ ಹೆಸರಿನಿಂದ ನನ್ನ ಹೆಸರಿಗೆ ಆಸ್ತಿ ಹಕ್ಕು ಬದಲಾವಣೆಯಾದ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಪ್ಲಾಟ್ ನಂ.6 ಡೋರ್ ನಂ. 13 ರ ಮನೆಯ ಚಕ್ಕುಬಂದಿ ಪೂಃ ಕೂಡ್ಲಿಗಿ ಹೆಚ್ ಬಿ ಹಳ್ಳಿ ರಸ್ತೆ ಎಂದರೆ ಸರಿ. ಪಃ ಖಾಲಿ ನಿವೇಶನ ಎಂದರೆ ಸರಿ. ದಃ ಉಪ್ಪಾರಗಟ್ಟಿ ವೀರಣ್ಣ ಇವರ ಮನೆ ಇದೆ

ಎಂದರೆ ಸರಿಯಲ್ಲ ಸಾಕ್ಷಿಯು ಅಲ್ಲಿ ಹೋಟೇಲ್ ಚನ್ನಮ್ಮ ಇವರ ಆಸ್ತಿ ಇದೆ ಎನ್ನುತ್ತಾರೆ. ಉಃಬಡಿಗೇರ ಸಣ್ಣಈರಪ್ಪನವರ ಆಸ್ತಿ ಇದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅಲ್ಲಿ ರಾಟೇರ ಈರಣ್ಣ ಇವರ ಆಸ್ತಿ ಇದೆ ಎನ್ನುತ್ತಾರೆ. ಡೋರ್ ನಂ.12 ಆಸ್ತಿಯನ್ನು ನಾನು ಗ್ರಾಮಪಂಚಾಯ್ತಿಯವರೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿಕೊಂಡಿರುವಂತಹ ದಾಖಲೆ ಎಂದರೆ ಸುಳ್ಳು.

ವಾದಿಯು ದಾವಾಸ್ತಿಯಲ್ಲಿ ಸ್ವಾಧೀನದಲ್ಲಿದ್ದು ನಾನು ರಾಜಕೀಯ ಮುಖಂಡರ ಸಹಾಯದಿಂದ ದಿಃ 02-08-2016 ರಂದು ದಾವಾಸ್ತಿಯಲ್ಲಿ ಅತಿಕ್ರಮಣ ಪ್ರವೇಶ ಮಾಡಲು ಹೋಗಿದ್ದೆ ಅದನ್ನು ವಾದಿಯು ತಡೆದಿರುತ್ತಾನೆಂದರೆ ಸುಳ್ಳು. ಈ ದಾವೆಯಲ್ಲಿ ನನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳು, ಫೋಟೋಗಳು ಸೃಷ್ಟಿ ಮಾಡಿಕೊಂಡ ದಾಖಲೆಗಳಾಗಿರುತ್ತವೆಂದರೆ ಸುಳ್ಳು. ವಾದಿಗೆ ಸರ್ಕಾರದವರು ದಾವಾಸ್ತಿಯನ್ನು ಮಂಜೂರು ಮಾಡಿ ಪಟ್ಟಾವನ್ನು ನೀಡಿದ್ದು ಅದರಂತೆ ಪಂಚಾಯ್ತಿಯವರು ಆಸ್ತಿ ದಾಖಲೆಗಳಲ್ಲಿ ವಾದಿಯ ಹೆಸರನ್ನು ನಮೂದಿಸಿರುತ್ತಾರೆ ಆದರೆ ನಾನು ಪಂಚಾಯ್ತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಹಕ್ಕನ್ನು ಸಾಧಿಸುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾದಿಯು ಸ್ವಾಧೀನದಲ್ಲಿದ್ದು ನಾವು ಆಸ್ತಿ ನಂ.12 ರಲ್ಲಿ ಸ್ವಾಧೀನದಲ್ಲಿರುತ್ತೇವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯ ಮೇಲೆ ಯಾವುದೇ ಹಕ್ಕು, ಅಧಿಕಾರ ಇಲ್ಲದಿದ್ದರೂ ಸಹಾ ದಾವಾಸ್ತಿಯನ್ನು ಕಬಳಿಸಲು ಸುಳ್ಳು ಪ್ರತಿವಾದ ಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿದಾರ ನಾಗರಾಜ ನನ್ನ ಸಂಬಂಧಿಕನಲ್ಲ. ನಾಗರಾಜ್ ಇವರ ತಾಯಿ ಮತ್ತು ನನ್ನ ತಾಯಿ ಸಂಬಂಧಿಕರು ಎಂದರೆ ಸರಿಯಲ್ಲ. ನಾನು ಮತ್ತು ನಾಗರಾಜ್ ಒಂದೇ ಕುಲಸ್ಥರು ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ